ಆ. ಮಲಪ್ರಭಾ 2ನೇ ಹಂತದ ಕುಡಿಯುವ ನೀರಿನ ಯೋಜನೆಯನ್ನು ಕೈಗೊಳ್ಳಲಾಗಿದ್ದು ಈ ಯೋಜನೆಯು ಪೂರ್ಣಗೊಳಿಸುವ ಹಂತದಲ್ಲಿದೆ.

ವಿಷಯ : ಶಿರಸಿ ಪುರಸಭೆಯನ್ನು ನಗರ ಸಭೆಯನ್ನಾಗಿ ಪರಿವರ್ತಿನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 771(1274)

ಶ್ರೀ ಪಿ.ಎಸ್. ಜಯವಂತ್(ಶಿರಸಿ): ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಶಿರಸಿ ನಗರದ ಜನಸಂಖ್ಯೆಯೆಷ್ಟು?

ಆ. ಶಿರಸಿ ಪುರಸಭೆಯನ್ನು ನಗರಸಭೆಯಾಗಿ ಪರಿವರ್ತಿಸಲಾಗಿದೆಯೇ? ಹಾಗದ್ದಲ್ಲಿ, ಇದರಲ್ಲಿ ಸೇರಿಸಿರುವ ಸುತ್ತಮುತ್ತಲಿನ ಗ್ರಾಮಗಳ ಸಂಖ್ಯೆ ಎಷ್ಟು?

ಇ. ಈ ಗ್ರಾಮಗಳಿಗೆ ನಗರ ಸೌಲಭ್ಯ ನೀಡಲಾಗುವುದೇ?

ಈ. ಈ ಗ್ರಾಮಗಳನ್ನು ಹೊರತುಪಡಿಸಿ ನಗರ ಸಭೆಯಾಗಿ ಪರಿವರ್ತಿಸಲು ಸಾಧ್ಯವಿಲ್ಲವೇ?

ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು):

ಅ. 1991ರ ಜನಗಣತಿಯ ಪ್ರಕಾರ ಶಿರಸಿ ನಗರದ ಜನಸಂಖ್ಯೆ 41,747 ಇರುತ್ತದೆ.

ಆ.ಇ.ಈ. ಸಂವಿಧಾನದ(74ನೇ ತಿದ್ದುಪಡಿ) ಕಾಯ್ದೆ 1992ರನ್ವಯ ಇದನ್ನು ಪರಿಶೀಲಿಸಲಾಗುತ್ತದೆ.

ವಿಷಯ : ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ಸಮಯಕ್ಕೆ ಸರಿಯಾಗಿ ನೂಲು ಪೂರೈಕೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 773(717)

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳಿಗೆ ಸರಿಯಾದ ಸಮಯಕ್ಕೆ ನೂಲು ಪೂರೈಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಪಿ.ಸಿ.ಸಿದ್ದನಗೌಡರ್(ಸಕ್ಕರೆ, ಜವಳಿ ವಿಜ್ಞಾನ, ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು):

1. ಹೌದು.

2. ಕೈಮಗ್ಗ ನೇಕಾರರಿಗೆ ಸಕಾಲದಲ್ಲಿ ನೂಲು ಪೂರೈಕೆಯನ್ನು ಮಾಡಲು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ:

ಅ. ರಾಜ್ಯದಲ್ಲಿರುವ ಹಾಗೂ ಹೊರ ರಾಜ್ಯಗಳಲ್ಲಿರುವ ಸಹಕಾರಿ ನೂಲಿನ ಗಿರಣಿಗಳಿಂದ ರಾಷ್ಟ್ರೀಯ ಜವಳಿ ನಿಗಮದ (ಎಸ್.ಟಿಸಿ.) ಗಿರಣಿಗಳಿಂದ ಮತ್ತು ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮದಿಂದ (ಎನ್.ಹೆಚ್.ಡಿ.ಸಿ.) ಅಗತ್ಯ ಪ್ರಮಾಣದ ನೂಲನ್ನು ಖರೀದಿಸಿ ನೇಕಾರರಿಗೆ ಸಕಾಲದಲ್ಲಿ ಸರಬರಾಜು ಮಾಡುವುದು.

ಆ. ಸರ್ಕಾರದಿಂದ ನಿಗಮಕ್ಕೆ ಸಂದಾಯವಾಗಬೇಕಾಗಿರುವ ಹಣವನ್ನು ಬಿಡುಗಡೆ ಮಾಡಲಾಗಿದ್ದು ನೂಲಿನ ಗಿರಣಿಗಳಿಂದ ನಿಗಮವು ಖರೀದಿಸಿ ನೂಲಿನ ಬಾಕಿ ಹಣವನ್ನು ಪಾವತಿ ಮಾಡಿ ಅವಶ್ಯಕ ಪ್ರಮಾಣದಲ್ಲಿ ನೂಲನ್ನು ಖರೀದಿಸಿ ನೇಕಾರರಿಗೆ ಪೂರೈಸುವುದು.

ವಿದ್ಯುತ್ ಮಗ್ಗಗಳಿಗೆ ನೂಲು ಪೂರೈಸುವ ಬಗ್ಗೆ ಸದ್ಯದಲ್ಲಿ ಸರ್ಕಾರದಲ್ಲಿ ಯಾವುದೇ ಯೋಜನೆ ಇರುವುದಿಲ್ಲ.

ವಿಷಯ: ಬಂಟಮಲ್ಯೆ ರಕ್ಷಿತಾರಣ್ಯಜಲ್ಲಿ ಸಿಗುವ ನಿಧಿ ನಿಕ್ಷೇಪದ ವಿವರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 774(739)

ಶ್ರೀ ಎಸ್. ಅಂಗಾರ (ಸೂಳ್ಯ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಸೂಳ್ಯ ತಾಲ್ಲೂಕಿನ ಅಂಬೆಕಲ್ಲು ಹತ್ತಿರದ ಬಂಟಮಲ್ಯೆ ರಕಿತಾರಣ್ಯದಲ್ಲಿ ಸಿಗುವ ಅದಿರುಗಳು ಯಾವುವು?

ಆ. ಇದರಲ್ಲಿ ಎಷ್ಟು ಶೇಕಡ ಲೋಹದ ಅಂಶ ಇದೆ?

ಇ. ಸೂಳ್ಯ ತಾಲ್ಲೂಕಿನ ಬಾಳಗೋಡುವುನ ಸೂಜಿಮಲ್ಯೆಯಲ್ಲಿ ಅರಳು ಕಲ್ಲುಗಳನ್ನು ಅಗೆಯುತ್ತಿರುವುದು ನಿಜವೆ?

ಈ. ಹಾಗಿದ್ದಲ್ಲಿ ಈ ಬಗ್ಗೆ ಯಾವ ಕ್ರಮಕೈಗೊಳ್ಳಲಾಗಿದೆ?

ಶ್ರೀ ಎಸ್.ಡಿ.ಜಯರಾಂ (ಗಣಿ ಮತ್ತು ಭೂ ವಿಜ್ಞಾನ ಸಚಿವರು):

ಅ. ಕಯನೈಟ್ ಮಾತ್ರ

ಆ. ಅಲ್ಯೂಮಿನಿಯಂ ಆಕ್ಸೈಡ್ ಶೇಕಡ 52.

ಇ. ಹೌದು.

ಈ. 1992ರಲ್ಲಿ ಅನಧಿಕೃತ ಗಣಿಗಾರಿಕೆಯನ್ನು ತಡೆಯಲಾಗಿದೆ. ಸೂಜಿಮೈ ಪ್ರದೇಶವು ಕಾದಿಟ್ಟ ಅರಣ್ಯ ಪ್ರದೇಶದಲ್ಲಿ ಬರುವುದರಿಂದ ಅರಣ್ಯ ಇಲಾಖೆಯನ್ನು ಅನಧಿಕೃತ ಗಣಿಗಾರಿಕೆಯನ್ನು ತಡೆಗಟ್ಟಲು ಕೋರಲಾಗಿದೆ. ಅಲ್ಲದೇ ಇತ್ತೀಚಿನ ದಿನಗಳಲ್ಲಿ ಅನಧಿಕೃತ ಗಣಿಗಾರಿಕೆ ನಡೆದ ಬಗ್ಗೆ ಮಾಹಿತಿ ಇರುವುದಿಲ್ಲ.